


## ಪುರಾತನ ದೇಗುಲ

ಗ್ರಾಮೀಣಾಭಿವೃದ್ಧಿ ಬಗ್ಗೆ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಡೆದಿತ್ತು.

'ಸರ್, ನಮ್ಮ ಕೆಲವು ಪಟ್ಟಣಗಳಿಗೆ ಪ್ರವಾಸಿಗರು ಜಾಸ್ತಿ ಬರುವಂತೆ ಮಾಡಬೇಕಿದೆ. ಏನು ಮಾಡೋದು?' ಅಧಿಕಾರಿ ಕೇಳಿದರು.

'ಅದಕ್ಕೇನು ಮಾಡುವುದು? ಆ ಊರುಗಳಲ್ಲೆಲ್ಲಾ ಎರಡೆರಡು ಪುರಾತನ ದೇಗುಲಗಳನ್ನು ಕಟ್ಟಿಸಿಬಿಡೋಣ' ಎಂದು ಸಚಿವರು ನುಡಿದರು.

## ಉಡಾಳ

ತಿಮ್ಮ: ನನ್ನ ಮಗ ಮಹಾ ಉಡಾಳ ಆಗ್ತಿದ್ದಾನೆ.

ಬೊಮ್ಮ: ಸಿಗರೇಟು, ಬೀಡಿ.. ಸೇದ್ತಾನಾ?

ತಿಮ್ಮ: ಇಲ್ಲಿಲ್ಲ.

ಬೊಮ್ಮ: ಬಾಟಲಿ ಗೀಟಲಿ, ಗಾಂಜಾ, ಏನಾದರೂ?

ತಿಮ್ಮ: ಛೇ, ಛೇ! ಅಂತಹದ್ದೇನಿಲ್ಲ.

ಬೊಮ್ಮ: ಎಷ್ಟು ದೊಡ್ಡವನು?

ತಿಮ್ಮ: ನಾಳೆಗೆ 10 ತಿಂಗಳು ತುಂಬುತ್ತೆ!

## ನಾನು ಬರಲೇ?

ಪತ್ನಿಯ ಮೇಲೆ ಸೂರನಿಗೆ ಅತೀವ ಕೋಪ ಬಂದಿತ್ತು.

'ಇನ್ನು ನಿನ್ನ ಮುಖ ನೋಡಲ್ಲ' ಎಂದು ಮನೆ ಬಿಟ್ಟು ಹೋಗಿದ್ದ.

2 ದಿನ ಕಾದು ಪತ್ನಿ ಶ್ಯಾಮಿ ಪತ್ರಿಕೆಯಲ್ಲಿ ಜಾಹೀರಾತು ಹಾಕಿಸಿದಳು.

'ನನ್ನ ದೊರೆ, ನೀವಿಲ್ಲದೇ ನಾನಿರಲಾರೆ, ಇನ್ನು ಯಾವತ್ತೂ ನೀವು ಅಡುಗೆ ಮಾಡುವುದು, ಬಟ್ಟೆ ಒಗೆಯುವುದು, ಪಾತ್ರೆ ತೊಳೆಯುವುದು ಬೇಡ. ನಿಮ್ಮ ಕಿಸೆಯಿಂದ ಕಾಸನ್ನೂ ಕದಿಯುವುದಿಲ್ಲ ಬೇಗ ಬನ್ನಿ.'

ಸೂರ ಬರಲೇ ಇಲ್ಲ. ಬದಲಾಗಿ ಹಲವು ಯುವಕರು ಬಂದು ಕೇಳಿದರು. 'ನಾನು ಬರಲೇ?'

## ನೆನಪಾಗುತ್ತೆ

ನಿನ್ನನ್ನ ನೋಡಿದಾಗಲೆಲ್ಲ ಆ ಕೆಳಗಿನ ಮನೆ ಸಣ್ಣೇಶಿ ನೆನಪಾಗ್ತಾನೆ!

ಅದು ಹೇಗೆ ಸಾಧ್ಯ? ಅವನು ಮುದುಕ, ನಾನು ಹುಡುಗ, ಅಷ್ಟಕ್ಕೂ ಅವನು ಕುರೂಪಿ!

ಕುರೂಪಿ ಆದರೇನು? ಅವನೂ ನಿನ್ನ ಹಾಗೆ ನನ್ನಿಂದ 5 ಸಾವಿರ ರೂಪಾಯಿ ಕೈಗಡ ತೆಗೆದುಕೊಂಡು ಹೋಗಿ ಕೈ ಎತ್ತಿದ್ದಾನೆ.

■ ಕೆ. ಶ್ರೀನಿವಾಸರಾವ್

